# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಂದಾಯ ಅಧಿಕಾರಿಗಳ ಕಛೇರಿ, ಗೋವಿಂದರಾಜನಗರ ವಿಭಾಗ, ಪಾಲಿಕೆ ಸೌಧ, 14ನೇ ಅಡ್ಡರಸ್ತೆ, 1ನೇ ಹಂತ, ಚಂದ್ರಾಬಡಾವಣೆ, ಬೆಂಗಳೂರು–560072.

ಸಂಖ್ಯೆ: ಕಂ.ಅ(ಗೋ.ನ)/ಪಿ.ಆರ್/ /2020–21 ದಿನಾಂಕ :06/02/2021

ದಿನಾಂಕ: 06.02.2021 ರಂದು ವಾರ್ಡ್ 126 ಮಾರುತಿ ಮಂದಿರ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು:

<u>ಹಾಜರಿದ್ದ ಅಧಿಕಾರಿಗಳು:</u>

1. ಕಂದಾಯ ಅಧಿಕಾರಿ (ಗೋವಿಂದರಾಜನಗರ)
2. ಸಹಾಯಕ ಅಭಿಯಂತರರು ವಾರ್ಡ್ 126
3. ಪಶು ಸಂಗೋಪನೆ ಇಲಾಖೆ
4. ತೋಟಗಾರಿಕೆ ಪರಿವೀಕ್ಷಕರು
5. ಆರೋಗ್ಯ ಪರಿವೀಕ್ಷಕರು
6. ಬೆಂಗಳೂರು ನೀರು ಸರಬರಾಜು ಮಂಡಳಿ
7. ಬೆಸ್ಕಾಂ
8. ಬೀದಿ ದೀಪ ನಿರ್ವಹಣೆ
9. ಕೆನರಾಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್
10. ವಿನಾಯಕ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್
11. ಪಿಎಫ್ ಲೇಔಟ್ ವೆಲ್‌ಫೇರ್ ಅಸೋಸಿಯೇಷನ್
12. ಕೆ ಹೆಚ್ ಬಿ ಎಂಎಸ್ ಬಿಲ್ಡಿಂಗ್ ವೆಲ್‌ಫೇರ್ ಅಸೋಷಿಯೇಷನ್

ವಾರ್ಡ್ ನಂ. 126 ಮಾರುತಿ ಮಂದಿರಕ್ಕೆ ಸಂಬಂಧಪಟ್ಟಂತ, ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಯನ್ನು ದಿನಾಂಕ: 06/02/2021 ರಂದು ಬೆಳಿಗ್ಗೆ 11–00 ಗಂಟೆಗೆ ಪ್ರಾರಂಭಿಸಲಾಯಿತು.

ಮೊದಲನೇಯದಾಗಿ ಆರೋಗ್ಯ ಇಲಾಖಾ ವತಿಯಿಂದ ವೈದ್ಯಾಧಿಕಾರಿಯಾದ ಡಾ: ಮಾಲತಿ ರವರು ಮಾತನಾಡುತ್ತಾರ, ಪ್ರೈಮರಿ ಹೆಲ್ತ್ ಸೆಂಟರ್‌ನಿಂದ ಪ್ರಸ್ತುತ ಮೆಷಿನ್ ಇಂದ್ರ ಧನುಷ್, ಪಲ್ಸ್ ಪೋಲೀಯೋ ಮತ್ತು ಎ.ಸಿ.ಎಫ್. ಸರ್ವೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಕರ್ತವ್ಯ ನಿರ್ವಹಿಸುತ್ತದೇವೆಂದು ಹಾಗೂ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಪ್ರತಿ ದಿನ ಸಂಜೆ 4–00 ಗಂಟೆಯಿಂದ 6–00 ಗಂಟೆಯವರೆಗೆ ನಾನಾ ರೀತಿಯ ಕಾಯಿಲೆಗಳಿಗೆ ಸಂಬಂಧಿಸಿದಂತೆ, ರೋಗ ತಜ್ಞರು ಹಾಜರಿದುದ, ಪ್ರತಿ ದಿನ ರೋಗ ತಪಾಸಣೆ ನಡೆಯುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದ್ದು, ಸಭೆಗೆ ಹಾಜರಾಗಿದ್ದ ವೆಲ್‌ಫೇರ್ ಅಸೋಸಿಯೇಷನ್ ಕಾರ್ಯದರ್ಶಿಗಳು/ಸಿಬ್ಬಂದಿಯವರುಗಳೂ ಪ್ರತಿ ದಿನ ಯಾವ ಯಾವ ಕಾಯಿಲೆಗಳಿಗೆ ರೋಗ ತಜ್ಞರು ಹಾಜರಿರುತಾರೆಯೋ, ಅವರುಗಳ ವಿವರಗಳನ್ನು ಪಡೆದುಕೊಂಡರು.

<u>ರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸಿರುವ ರಸ್ತೆಯ ಹೆಸರು, ವಿಳಾಸಗಳ ಬಗ್ಗೆ:</u> ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು ಸಭೆಯಲ್ಲಿ ಮಾತನಾಡುತ್ತಾ, ವಾರ್ಡ್ ನಂ. 126, ಮಾರುತಿ ಮಂದಿರದಲ್ಲಿನ ಎಲ್ಲಾರಸ್ತೆಗಳಲ್ಲಿ ನಾಮಫಲಕಗಳಲ್ಲಿ ರಸ್ತೆಯ ಹೆಸರು ಮತ್ತು ವಿಳಾಸವನ್ನು ಮುದ್ರಿಸಿರುವುದಿಲ್ಲವಾದ್ದರಿಂದ, ಮುದ್ರಿಸುವಂತೆ ಸೂಚಿಸಿದರು.

ಕ್ರಮ: ಸ.ಕಾ.ನಿ.ಅ(ಚಂ.ಬ)/ಸ.ಅ, ವಾರ್ಡ್ ನಂ126

Scanned by CamScanner

**ಬೀದಿ ದೀಪಗಳ ನಿರ್ವಹಣೆ ಬಗ್ಗೆ** : ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು ಮಾತನಾಡುತ್ತಾ, 6ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸದೆ ಇರುವುದರಿಂದ, ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿರುವುದರಿಂದ, ಸರಿಪಡಿಸಲು ಕೋರಿರುತ್ತಾರೆ.

ಕ್ರಮ: ಕಾ.ಅ(ವಿದ್ಯುತ್)(ಪಶ್ಚಿಮ)

**ಸಿ.ಎ.ಸೈಟುಗಳಿಗೆ ತಂತಿ ಬೇಲಿ ಅಳವಡಿಸುವ ಬಗ್ಗೆ:** ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು ಸಭೆಯಲ್ಲಿ ನಿವೇಶನದ ಸಂಖ್ಯ 227 ಮತ್ತು 229 ರ ಮಧ್ಯೆ 228ರ ನಿವೇಶನವು ಸಿ.ಎ. ನಿವೇಶನವಾಗಿರುವುದರಿಂದ, ಗಿಡಮರಗಳು ಬೆಳೆದು ಹಾಗೂ ಸಾರ್ವಜನಿಕರು ಕಸವನ್ನು ತಂದು ಹಾಕುತ್ತಿರುವುದರಿಂದ, ಹುಳಹುಪ್ಪಟ್ಟುಗಳು ಜಾಸ್ತಿಯಾಗುತ್ತಿರುವುದರಿಂದ, ಬೇಲಿ ಹಾಕಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕೋರಿದರು. ಕಂದಾಯ ಇಲಾಖೆಯಿಂದ ಹಾಜರಾಗಿದ್ದ ಕಂದಾಯ ಪರಿವೀಕ್ಷಕರು ಮಾತನಾಡಿ, ಸಿ.ಎ. ನಿವೆಸನದ ಬಗ್ಗೆ ವಿವರವನ್ನು ಪಡೆದು, ತಪಾಸಣೆ ಮಾಡುವುದಾಗಿ ತಿಳಿಸಿದರು.

ಕ್ರಮ: ಸ.ಕಾ.ನಿ.ಅ(ಚಂ.ಬ)/ಸ.ಅ ಹಾಗೂ ಸ.ಕಂ.ಅ(ಚಂ.ಬ)/ಕಂ.ಪ

**ರಸ್ತೆಗಳನ್ನು ಸ್ವಚ್ಛಗೊಳಿಸುವ ಬಗ್ಗೆ:** ಮರದಲ್ಲಿನ ಎಲೆಗಳು ಉದುರುತ್ತಿರುವುದಾಗಿ ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನರ್ ರವರು ತಿಳಿಸಿದ್ದು, ರಸ್ತೆಗಳಲ್ಲಿನ ಕಸವನ್ನು ಸ್ವಚ್ಚಗೊಳಿಸುತ್ತಿಲ್ಲವಾದ್ದರಿಂದ, ವಾರಕ್ಕೆ ಎರಡು ದಿನ ರಸ್ತೆಗಳನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಹಮ್ಮಿಕೊಳ್ಳಬೇಕೆಂದು ವಿನಂತಿಕೊಂಡಿರುತ್ತಾರೆ.

ಕ್ರಮ: ಸ.ಕಾ.ಅ(ಚಂ.ಬ)/ಆರೋಗ್ಯ ಪರಿವೀಕ್ಷಕರು

**ಕೊಂಬೆಗಳನ್ನು ಕತ್ತರಿಸುವಿಕೆ:** ವಾರ್ಡ್‌ನ ಕೆನರಾ ಬ್ಯಾಂಕ್ ಕಾಲೋನಿ, ವಿನಾಯಕ ಬಡಾವಣೆ ಬೀದಿ ಬದಿಯಲ್ಲಿನ ಮರದ ಕೊಂಬೆಗಳು ದೊಡ್ಡದಾಗಿ ಬೆಳೆದಿದ್ದು, ಇದರಿಂದ ತೊಂದರೆಯಾಗುತ್ತಿರುವುದರಿಂದ, ಸದರಿ ಬಡಾವಣೆಗಳಲ್ಲಿನ ಮರದ ಕೊಂಬೆಗಳನ್ನು ಗುರುತಿಸಿ, ಮಾಲೀಕರಿಂದ ಪತ್ರ ಪಡೆದು ನಿಯಮಾವಳಿಗಳಂತೆ, ಮರದ ಕೊಂಬೆಗಳನ್ನು ಕತ್ತರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಕ್ರಮ: ವಲಯ ಅರಣ್ಯಾಧಿಕಾರಿ

**ಟ್ರಾನ್ಸ್‌ಫಾರ್ಮರ್ ನ್ನು ಬೇರೆ ಸ್ಥಳಕ್ಕೆ ಅಥವಾ ರಿಪೇರಿ ಮಾಡುವ ಬಗ್ಗೆ:** ಶ್ರೀ ಟಿ. ರಾಮು, ಕೆಹೆಚ್.ಬಿ. ಎಂ.ಎಸ್.ಬಿಲ್ಡಿಂಗ್ ಓನರ್ ವೆಲ್‌ಫೇರ್ ಅಸೋಸಿಯೇಷನ್ ರವರು ಈ ಹಿಂದಿನ ಸಭೆಯಲ್ಲಿ ಟ್ರಾನ್ಸ್‌ಫಾರ್ಮರ್ ಕೆಟ್ಟು ಹೋಗಿದ್ದು, ಅದನ್ನು ಸರಿಪಡಿಸುವಂತೆ ತಿಳಿಸಿದ್ದು, ಬೆಸ್ಕಾಂ ರವರು ಇದುವರೆವಿಗೂ ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲವೆಂದು ಬೇಸರ ವ್ಯಕ್ತಪಡಿಸಿರುವುದರಿಂದ, ಕೂಡಲೇ ಬೆಸ್ಕಾಂ ಇಲಾಖೆರವರು ಕ್ರಮ ಕೈಗೊಳ್ಳಲ್ಲು ಸೂಚಿಸಿದೆ.

ಕ್ರಮ: ಬೆಸ್ಕಾಂ

**ಡೆಬ್ರಿಸ್‌ನ್ನು ತೆಗೆಯದೇ ಇರುವ ಬಗ್ಗೆ:** ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ರಸ್ತೆಗಳನ್ನು ಅಗೆದು, ಪೈಪುಗಳನ್ನು ಅಳವಡಿಸಿ ಮುಚ್ಚಿ ಹೋಗುವ ಕರ್ತವ್ಯವಾಗಿರುತ್ತದೆ. ಆದರೆ, ರಸ್ತೆಗಳನ್ನು ಅಗೆದು, ಪೈಪುಗಳನ್ನು ಭೂಮಿಯೊಳಗೆ ಅಳವಡಿಸಿ, ಮಣ್ಣನ್ನು ಸರಿಯಾಗಿ ಮುಚ್ಚದೇ ಹಾಗೆಯೇ ಬಿಟ್ಟು ಹೋಗಿರುತ್ತಾರೆ. ಸದರಿ ಇಲಾಖೆಗೆ ಸಾರ್ವಜನಿಕರು ಸಂಪರ್ಕಿಸಿದಾಗ, ಬಿ.ಬಿ.ಎಂ.ಪಿ.ಯ ಸಹಾಯಕ ಅಭಿಯಂತರರು ಸರಿಪಡುಸುತಾರೆಂದು ಉತ್ತರ ಹೇಳಿ,

Scanned by CamScanner

ಕಳುಹಿಸುವುದಾಗಿದೆ ಎಂದು ಅಸೋಸಿಯೇಷನ್ ರವರು ಸಭೆಯಲ್ಲಿ ತಿಳಿಸಿರುವುದರಿಂದ ಇನ್ನು ಮುಂದೆ ರಸ್ತೆಗಳಲ್ಲಿ ಅಗೆದ ಸಂದರ್ಭದಲ್ಲಿ ಗುಂಡಿಗಳನ್ನು ಅದೇ ಇಲಾಖೆಯವರು ಮುಚ್ಚಬೇಕೆಂದು ತಿಳಿಸಲಾಯಿತು.

ಕ್ರಮ: ಬೆಸ್ಕಾಂ/ಬಿ.ಡಬ್ಲ್ಯೂ.ಎಸ್.ಎಸ್.ಬಿ.

ಸಭೆಯನ್ನು 12-30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

N. Uma 6/2/2021

(ಎಸ್ ಉಮಾ)
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ
ಹಾಗೂ ಕಂದಾಯ ಅಧಿಕಾರಿ
ಗೋವಿಂದರಾಜನಗರ
ವಾರ್ಡ್ 126, ಮಾರುತಿ ಮಂದಿರ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ಮಂಡಿಸಿದೆ.
2. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಮಂಡಿಸಿದೆ.
3. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಳುಹಿಸುತ್ತಾ ಮುಂದಿನ ಸಭೆಯೊಳಗೆ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.
4. ಕಛೇರಿ ಕಡತಕ್ಕೆ.

Scanned by CamScanner